# ಕರ್ನಾಟಕ ಡೇಟಾ ಕೇಂದ್ರಗಳ ಬೆಳವಣಿಗೆಗೆ ಚಾಲನೆ- ಕರ್ನಾಟಕ ಡೇಟಾ ಸೆಂಟರ್ ನೀತಿ -2022-27

## ರಾಜ್ಯದಲ್ಲಿ ದತ್ತಾಂಶ ಕೇಂದ್ರಗಳ ಬೆಳವಣಿಗೆಗೆ ಚಾಲನೆ" ಕರ್ನಾಟಕ ದತ್ತಾಂಶ ಕೇಂದ್ರ ನೀತಿ 2022-27

- **ಈ ನೀತಿಯು 200 ಮೆಗಾವ್ಯಾಟ್ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಮತ್ತು 2025 ರ ವೇಳೆಗೆ ರಾಜ್ಯದಲ್ಲಿ ಸುಮಾರು 10,000 ಕೋಟಿ ರೂಪಾಯಿಗಳ ದೇಶೀಯ ಮತ್ತು ವಿದೇಶಿ ಹೂಡಿಕೆಗಳನ್ನು ಆಕರ್ಷಿಸುವ ಮೂಲಕ ರಾಜ್ಯದಲ್ಲಿ ವಿಶ್ವ ದರ್ಜೆಯ ದತ್ತಾಂಶ ಕೇಂದ್ರದ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸಲು ಉದ್ದೇಶಿಸಿದೆ.**
- **ಬೆಂಗಳೂರು ನಗರ ಜಿಲ್ಲೆಯ ಹೊರಗೆ ಭೂಮಿ ಮತ್ತು ಕಟ್ಟಡವನ್ನು ಹೊರತುಪಡಿಸಿ ಸ್ಥಿರ ಆಸ್ತಿಗಳ ಮೌಲ್ಯದ ಮೇಲೆ 7% ರಷ್ಟು, ರೂ 10 ಕೋಟಿ ವರೆಗೆ ಬಂಡವಾಳ ಸಬ್ಸಿಡಿ**
- **ಬೆಂಗಳೂರು ನಗರ ಜಿಲ್ಲೆಯ ಹೊರಗಿನ ಭೂಮಿಯ ಖರೀದಿ/ಗುತ್ತಿಗೆಗೆ ದತ್ತಾಂಶ ಕೇಂದ್ರಗಳಿಗೆ ಒಟ್ಟು ಭೂ ವೆಚ್ಚದ 10% ಅಥವ ರೂ 3 ಕೋಟಿ ವರೆಗೆ ಭೂ ಸಬ್ಸಿಡಿ .**
- **ರಾಜ್ಯದಲ್ಲಿ ಹೊಸ ಮತ್ತು ಅಸ್ತಿತ್ವದಲ್ಲಿರುವ ದತ್ತಾಂಶ ಕೇಂದ್ರ ಘಟಕಗಳಿಗೆ ವಾಣಿಜ್ಯ ವಿದ್ಯುತ್ ಸುಂಕದ ಬದಲು ಕೈಗಾರಿಕಾ ವಿದ್ಯುತ್ ಸುಂಕದ ರಿಯಾಯಿತಿ**
- **ಹಸಿರು ವಿದ್ಯೂತ್ ಸುಂಕ 50% ಕ್ಕಿಂತ ಹೆಚ್ಚು ನವೀಕರಿಸಬಹುದಾದ ಮೂಲಗಳಿಂದ ಶಕ್ತಿಯನ್ನು ಬಳಸುವ 5 MW ವರೆಗಿನ ದತ್ತಾಂಶ ಕೇಂದ್ರಗಳಿಗೆ ಪ್ರತಿ ಯೂನಿಟ್ ಗೆ ರೂ0.50 ರಂತೆ ಸರ್ಚಾರ್ಜ್ 5 ವರ್ಷಗಳವರೆಗೆ (₹ 1.25 ಕೋಟಿಗೆ), ಪ್ರತಿ ವರ್ಷಕ್ಕೆ ರೂ 25 ಲಕ್ಷ ರಂತೆ ಮಿತಿಗೊಳಿಸಿ ಮರುಪಾವತಿ.**
- **ವಿದ್ಯುತ್ ಸುಂಕದಿಂದ 5 ವರ್ಷಗಳವರೆಗೆ 100% ವಿನಾಯಿತಿ**
- **ಬೆಂಗಳೂರು ನಗರ ಜಿಲ್ಲೆಯ ಹೊರಗಿನ ದತ್ತಾಂಶ ಕೇಂದ್ರಗಳಿಗೆ 10 ಎಕರೆವರೆಗೆ ಭೂಮಿಗೆ ಮುದ್ರಾಂಕ್ ಶುಲ್ಕದಲ್ಲಿ 100% ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ಪ್ರತಿ ರೂ 1, 000/- ಕ್ಕೆ ರೂ 1 ರಂತೆ ರಿಯಾಯಿತಿ**
- **ಬೆಂಗಳೂರು ನಗರ ಜಿಲ್ಲೆಯ ಹೊರಗಿನ ದತ್ತಾಂಶ ಕೇಂದ್ರಗಳಿಗೆ ಕೃಷಿ ಬಳಕೆಯಿಂದ ಕೈಗಾರಿಕಾ ಪ್ರದೇಶಕ್ಕೆ ಭೂಮಿಯನ್ನು ಪರಿವರ್ತಿಸಲು ಭೂ ಪರಿವರ್ತನೆ ಶುಲ್ಕದ 100% ವಿನಾಯಿತಿ.**